ನಡೆದುಕೊಳ್ಳುತ್ತಿದ್ದ ಗೋಪಾಲೇರ್‌ಮಾ, ರಾಮಕೃಷ್ಣರ ನಿಕಟ ಸಂಪರ್ಕದಿಂದ ಪೂರ್ಣ ಪರಿವರ್ತನೆ ಹೊಂದಿದರು. ಅಲ್ಲಿಗೆ ಬಂದ ಭಕ್ತರ ಊಟವಾದ ಮೇಲೆ ಎಂಜಲನ್ನು ಒರೆಸಿ ಅನಂತರವಷ್ಟೇ ಊಟ ಮಾಡುತ್ತಿದ್ದರು. ಅಷ್ಟೇ ಅಲ್ಲದೆ ಮುಂದಿನ ದಿನಗಳಲ್ಲಿ ವಿದೇಶದಿಂದ ಬಂದ ನಿವೇದಿತಾಳಿಗೆ ತಮ್ಮ ಜೊತೆಯಲ್ಲೇ ಇರಲು ಅವಕಾಶವನ್ನೂ ಮಾಡಿಕೊಟ್ಟರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಚಿಕ್ಕ ಗಿಡಕ್ಕೆ ಬೇಲಿ ಹಾಕಬೇಕು; ಅದು ಬೆಳೆದು ದೊಡ್ಡ ಮರವಾದಾಗ ಬೇಲಿಯ ಆವಶ್ಯಕತೆ ಇರುವುದಿಲ್ಲ" ಎಂದು. ಈ ಮಾತಿಗೆ ಗೋಪಾಲೇರ್‌ಮಾ ಸಾಕ್ಷಿಯಾಗಿದ್ದಾರೆ. ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ಮೊದಲು ಸಂಯಮಿಯಾಗಿರಬೇಕು. ಆದರೆ ಮುಂದುವರಿದಂತೆಲ್ಲಾ ಸಾಧಕನ ಹೃದಯ ವಿಶಾಲವಾಗುವುದೇ ಅಲ್ಲದೆ, ಎಲ್ಲರಲ್ಲೂ ತನ್ನ ಇಷ್ಟದೇವತೆಯನ್ನು ಕಾಣಲು ಅವನು ಆರಂಭಿಸುತ್ತಾನೆ. ಇದನ್ನು ಶ್ರೀರಾಮಕೃಷ್ಣರು ಗೋಪಾಲೇರ್‌ಮಾ ಮೂಲಕ ಜಗತ್ತಿಗೆ ತೋರಿಸಿದ್ದಾರೆ.

**ಗೌರೀಮಾ** : ಶ್ರೀರಾಮಕೃಷ್ಣರು ಹಗಲೂ ರಾತ್ರಿ ಯಾವಾಗಲೂ ಅಂತರಂಗದ ಜಗತ್ತಿನ ಜ್ಞಾನಾನಂದದಲ್ಲೇ ತಲ್ಲೀನರಾಗಿದ್ದರೂ, ಭಾರತೀಯ ನಾರಿಯರ ಶೋಚನೀಯ ಅವಸ್ಥೆಯನ್ನು ಮರೆಯಲಿಲ್ಲ. ಪೂರ್ವಕಲ್ಪಿತ ಅಂಧಾನುಕರಣೆ, ಪಕ್ಷಪಾತ, ಸೌಕರ್ಯ ಹಕ್ಕುಗಳಿಂದ ವಂಚನೆ – ಇವುಗಳಿಂದ ಬಳಲುತ್ತಿದ್ದ ಭಾರತೀಯ ಸ್ತ್ರೀಯರ ಬಗ್ಗೆ ಅವರು ಬಹಳ ಆಲೋಚಿಸುತ್ತಿದ್ದರು. ಧರ್ಮದ ಮೂಲಕ ಸ್ತ್ರೀಶಿಕ್ಷಣ ದೊರಕದಿದ್ದರೆ ಸ್ತ್ರೀಯರ ಏಳ್ಗೆ ಹಾಗೂ ಭಾರತದ ಉದ್ಧಾರ ಎಂದಿಗೂ ಆಗುವುದಿಲ್ಲ ಎಂಬುದನ್ನು ಶ್ರೀರಾಮಕೃಷ್ಣರು ಅರಿತಿದ್ದರು. ಆದ್ದರಿಂದ ಅಪೂರ್ವ ಪ್ರತಿಭೆ, ವಿದ್ಯೆ ಮತ್ತು ಆಧ್ಯಾತ್ಮಿಕ ಸಂಪನ್ನತೆಗಳಿಂದ ಕೂಡಿದ್ದ ಗೌರೀಮಾ ಅವರಿಗೆ, ಸ್ತ್ರೀಯರ ಏಳ್ಗೆಗಾಗಿ ಯಾವ ರೀತಿ ಶ್ರಮಿಸಲು ಸಾಧ್ಯ ಎಂಬುದನ್ನು ತಮ್ಮ ಸರಳ ಮಾತುಗಳಿಂದ ಉತ್ತೇಜನ ಕೊಟ್ಟರು; ಸ್ತ್ರೀಯರ ಉನ್ನತಿಗಾಗಿ ದುಡಿಯಲು ಕರೆಕೊಟ್ಟರು. ಒಂದು ಸಲ ದಕ್ಷಿಣೇಶ್ವರದಲ್ಲಿ ಗೌರೀಮಾ ಹೂವು ಬಿಡಿಸುತ್ತಿರುವಾಗ, ಶ್ರೀರಾಮಕೃಷ್ಣರು ಕೈಯಲ್ಲಿ ನೀರಿರುವ ಪಾತ್ರೆ ತೆಗೆದುಕೊಂಡು ಬಂದು ಹೀಗೆ ಹೇಳುತ್ತಾರೆ: "ಗೌರಿ, ನಾನು ನೀರು ಹಾಕುತ್ತೇನೆ, ನೀನು ಮಣ್ಣನ್ನು ಕಲಸು." ಗೌರೀ ಮಾ ಅದಕ್ಕೆ, "ಇಲ್ಲಿ ಎಲ್ಲಿದೆ ಮಣ್ಣು! ಬರೀ ಬೆಣಚು ಕಲ್ಲು" ಎನ್ನುತ್ತಾರೆ. ಶ್ರೀರಾಮಕೃಷ್ಣರು ಅದಕ್ಕೆ, "ನಾನು ಹೇಳಿದ್ದೇನು? ನೀನು ಅರ್ಥಮಾಡಿಕೊಂಡಿದ್ದೇನು? ಈ ದೇಶದ ಸ್ತ್ರೀಯರು ಬಹಳ ಶೋಚನೀಯ ಸ್ಥಿತಿಯಲ್ಲಿ ಇದ್ದಾರೆ, ಅವರಿಗಾಗಿ ನೀನು ದುಡಿಯಬೇಕು" ಎಂದು ಹೇಳುತ್ತಾರೆ. ಮೊದಮೊದಲು ಗೌರೀಮಾ ಇದಕ್ಕೆ ಸಮ್ಮತಿಸದಿದ್ದರೂ ಕೊನೆಯಲ್ಲಿ ಸುಮಾರು ೪೦ ವರ್ಷಗಳ ಕಾಲ ಸ್ತ್ರೀಶಿಕ್ಷಣಕ್ಕಾಗಿ ದುಡಿದರು. ಅಷ್ಟಲ್ಲದೆ, ಮುಂದೆ ಶ್ರೀಮಾತೆಯರ ಅನುಮತಿ ಪಡೆದು ಬ್ಯಾರಕ್‌ಪುರದ ಬಳಿ ಕಪಾಲೇಶ್ವರ ಎಂಬ ಜಾಗದಲ್ಲಿ 'ಶಾರದೇಶ್ವರಿ ಆಶ್ರಮ' ಎಂಬ ಹೆಣ್ಣುಮಕ್ಕಳ ಆಶ್ರಮವನ್ನು ಸ್ಥಾಪಿಸಿದರು. ಆ ಮೂಲಕ, ಒಂದು ಆದರ್ಶ ಸಂನ್ಯಾಸಿನೀ ಸಂಘ ರೂಪುಗೊಳ್ಳಲು ಕೂಡ ಶ್ರಮಿಸಿದರು.

**ಶ್ರೀಮಾತೆ ಶಾರದಾದೇವಿ:** ಶ್ರೀಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣರನ್ನು ಭಕ್ತಿಯಿಂದ, ಪ್ರೀತಿಯಿಂದ ಪೂಜಿಸುತ್ತಿದ್ದರು. ಅವರು ಶ್ರೀರಾಮಕೃಷ್ಣರ ಶ್ರೇಷ್ಠ ಭಕ್ತೆ ಮತ್ತು ಉತ್ತಮ ಶಿಷ್ಯೆ – ಎಲ್ಲವೂ ಆಗಿದ್ದರು. ಹೀಗಾಗಿ ತಮ್ಮ ಪತಿದೇವರ ಬೋಧಾಮೃತವನ್ನು ಚೆನ್ನಾಗಿ ಆಸ್ವಾದಿಸಿದ್ದು ಮಾತ್ರವಲ್ಲದೆ, ತಮ್ಮ ನಿತ್ಯಜೀವನದಲ್ಲಿ ಅದನ್ನು ಪೂರ್ಣವಾಗಿ ಅಳವಡಿಸಿಕೊಂಡಿದ್ದರು. ಶ್ರೀರಾಮಕೃಷ್ಣರು ಬಹುತೇಕ ಸಮಾಧಿಸ್ಥಿತಿಯಲ್ಲೇ ಇರುತ್ತಿದ್ದರೂ ಸಣ್ಣ ಸಣ್ಣ ವಿಷಯಗಳಲ್ಲಿಯೂ ಶ್ರೀಮಾತೆಯವರಿಗೆ ಉಪದೇಶಿಸುತ್ತಿದ್ದರು. ಯಾವ ಅಡುಗೆಯಲ್ಲಿ ಯಾವ ಮಸಾಲೆ ಎಷ್ಟು ಇರಬೇಕು ಎಂಬುದನ್ನು ನಿಖರವಾಗಿ ತಿಳಿಸಿಕೊಟ್ಟಿದ್ದಲ್ಲದೆ, ಅಂಗಡಿಗೆ ಹೋಗಿ ಒಂದು ನಿಂಬೆಹಣ್ಣು ಖರೀದಿಸಿದರೂ ಸಹ ಕೊಸರು ಕೇಳಬೇಕು ಎಂದು ಹೇಳುತ್ತಿದ್ದರು. ಅದಲ್ಲದೆ ಅವರು ಯಾವುದೇ ವಸ್ತುವನ್ನು ಎಲ್ಲಿಂದ ತೆಗೆದುಕೊಂಡರೂ ಅದೇ ಜಾಗದಲ್ಲಿ ಇಡುತ್ತಿದ್ದರು. ಭಗವದ್‌ಧ್ಯಾನದಲ್ಲೇ ತಲ್ಲೀನರಾಗಿದ್ದರೂ ಲೌಕಿಕವಾಗಿಯೂ ಅವರ ಬುದ್ಧಿ ಜಾಗೃತವಾಗಿತ್ತು; ಅಸಾಧಾರಣ ವ್ಯಾವಹಾರಿಕ ಜ್ಞಾನ ಅವರದಾಗಿತ್ತು. ಲೌಕಿಕ ಮತ್ತು ಅಲೌಕಿಕ ಜೀವನಗಳೆರಡರಲ್ಲೂ ಕುಶಲತೆಯಿಂದ ಇರಬೇಕು, ಸದಾ ಜಾಗೃತವಾಗಿರಬೇಕು ಎನ್ನುವುದೇ ಅವರ ಅಭಿಪ್ರಾಯವಾಗಿತ್ತು. "ಸಾಧಕನು ತನ್ನ ಜೀವನದಲ್ಲಿ ಎಚ್ಚರ ತಪ್ಪಿದಾಗ ಸೋಮಾರಿತನ, ವಿಲಾಸೀಜೀವನಗಳು ಉಂಟಾಗಿ ಅವು ಸಂಸಾರಕ್ಕೆ ಅವನನ್ನು ಬಂಧಿಸುತ್ತದೆ. ಜಾಗೃತರಾಗಿರುವುದು ಕೇವಲ ಆಧ್ಯಾತ್ಮಿಕ ಜೀವನಕ್ಕೆ ಮಾತ್ರವಲ್ಲ, ಲೌಕಿಕ ಜೀವನಕ್ಕೂ ಅತ್ಯಂತ ಅವಶ್ಯಕ. ಸಂಸಾರದಲ್ಲಿರುವುದು ದೋಷವಲ್ಲ, ಆದರೆ ಮನಸ್ಸಿನಲ್ಲಿ 'ಈ ಸಂಸಾರ ಅನಿತ್ಯ' ಎಂಬ ಭಾವನೆ ಇರಬೇಕು. ಹಾಗೆಯೇ, 'ದೇವರು ಮಾತ್ರ ಸತ್ಯ' ಎಂಬ ಭಾವನೆ ನಮ್ಮಲ್ಲಿ ಜಾಗೃತವಾಗಿರಬೇಕು" – ಹೀಗೆ ಶ್ರೀರಾಮಕೃಷ್ಣರು ಶ್ರೀಮಾತೆ ಶಾರದಾದೇವಿಯವರಿಗೆ ಉಪದೇಶ ಮಾಡುತ್ತಿದ್ದರು.

ಇದಲ್ಲದೆ, ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಎಲ್ಲರೊಡನೆ ಹೇಗೆ ಹೊಂದಿಕೊಂಡು ಬದುಕಬೇಕೆಂಬುದನ್ನೂ ಹೇಳಿಕೊಟ್ಟರು. ಈ ಮೂಲಕ ಮಾತೆಯವರು ಶ್ರೀರಾಮಕೃಷ್ಣರಿಂದ ಸಮನ್ವಯ ಶಿಕ್ಷಣವನ್ನು ಪಡೆದರು. ಕುಟುಂಬದಲ್ಲಿ ವಾಸ್ತವಿಕ ದೃಷ್ಟಿ ತಳೆದು, ಪರಸ್ಪರ ಒಬ್ಬರು ಮತ್ತೊಬ್ಬರನ್ನು ಸರಿಯಾಗಿ ಅರ್ಥಮಾಡಿಕೊಂಡು ಬಾಳಬೇಕು. ಇಲ್ಲದಿದ್ದರೆ ನಿತ್ಯಜೀವನದಲ್ಲಿ ಶಾಂತಿಯಿಂದ ಬಾಳಲು ಸಾಧ್ಯವಿಲ್ಲ. ಜೀವನದಲ್ಲಿ ನೀತಿನಿಯಮಗಳನ್ನು ಪಾಲಿಸಬೇಕು. ಅದರೊಂದಿಗೆ ವಿಶಾಲದೃಷ್ಟಿ ಮತ್ತು ನಿಃಸ್ವಾರ್ಥತೆಯನ್ನು ಸಹ ಬೆಳೆಸಿಕೊಳ್ಳಬೇಕು. ಈ ಎಲ್ಲ ಅಂಶಗಳನ್ನು ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರಿಂದ ಕಲಿತರು.


ಹೀಗೆ ಶ್ರೀರಾಮಕೃಷ್ಣರು ಸ್ತ್ರೀಭಕ್ತರಿಗೆ ಸಮನ್ವಯ ಕೌಶಲ್ಯದ ಶಿಕ್ಷಣವನ್ನು ನೀಡಿ, ಅದರಿಂದ ಅವರೆಲ್ಲರಿಗೂ ಸಂಸಾರದಲ್ಲಿ ಶಾಂತಿ, ಆನಂದಗಳು ಲಭಿಸುವಂತೆ ಮಾಡಿದರು. ಶ್ರೀರಾಮಕೃಷ್ಣರು ಸ್ತ್ರೀಸಾಧಕರಿಗೆ ಸಾಧನೆ ಮಾಡಲು ಚೈತನ್ಯವನ್ನು ತುಂಬಿ, ಅವರ ಜೀವನ ಸಫಲವಾಗುವಂತೆ ಮಾಡಿದ ಜಗದ್ಗುರುವಾಗಿದ್ದಾರೆ. **'ಜೀವಸೇವೆಯೇ ಈಶಸೇವೆ', 'ಭಗವತ್‌ಸಾಕ್ಷಾತ್ಕಾರವೇ ಜೀವನದ ಧ್ಯೇಯ'** – ಇವೇ ಮುಂತಾದ ಸಂದೇಶಗಳನ್ನು ಸ್ವತಃ ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಂಡದ್ದೇ ಅಲ್ಲದೆ, ಸ್ತ್ರೀಭಕ್ತರ ಮೂಲಕ ಇಡೀ ಜಗತ್ತಿಗೆ ತಿಳಿಸಿರುವುದೇ ಶ್ರೀರಾಮಕೃಷ್ಣರು ನಮಗೆ ನೀಡಿರುವ ಅತ್ಯಂತ ಅಮೂಲ್ಯವಾದ ಕೊಡುಗೆಯಾಗಿದೆ.

# ಶ್ರೀರಾಮಕೃಷ್ಣರು ಮತ್ತು ಜ್ಞಾನಯೋಗ

ಪ್ರವ್ರಾಜಿಕಾ ಪರಮಪ್ರಾಣಾ

ಶ್ರೀರಾಮಕೃಷ್ಣರು ಸಕಲಯೋಗಸ್ವರೂಪರು. ಜ್ಞಾನಯೋಗವು ಅವರ ಉಪದೇಶಗಳಲ್ಲಿ ಕೇವಲ ಸಿದ್ಧಾಂತವಾಗಿ ಉಳಿಯುವುದಿಲ್ಲ; ಸಜೀವ ಜೀವನಧ್ಯೇಯವಾಗಿ ಹೊರಹೊಮ್ಮುತ್ತದೆ. ಶಾಸ್ತ್ರಗಳ ಬೆಳಕಿನಿಂದ ಶ್ರೀರಾಮಕೃಷ್ಣರ ಜ್ಞಾನಯೋಗದ ಬೋಧನೆಗಳನ್ನು ಸಮರ್ಥವಾಗಿ ವಿಶ್ಲೇಷಿಸಿರುವ ಮಾತಾಜಿಯವರು ದಕ್ಷಿಣೇಶ್ವರದಲ್ಲಿರುವ ಶ್ರೀಶಾರದಾಮಠದ ಪ್ರಧಾನ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು.

ತಮ್ಮ ಮೊದಲ ಸಂದರ್ಶನದಲ್ಲಿಯೆ ಮಾಸ್ಟರ್ ಮಹಾಶಯರು ಶ್ರೀರಾಮಕೃಷ್ಣರಿಂದ ಹೊಸದೊಂದು ಪಾಠ ಕಲಿತರು; "ಈಶ್ವರನನ್ನು ಅರಿಯುವುದೇ ಜ್ಞಾನ, ಆತನನ್ನು ಅರಿಯದಿರುವುದೇ ಅಜ್ಞಾನ" ಎನ್ನುವುದೇ ಆ ಪಾಠ. ಮಾಸ್ಟರ್ ಅದುವರೆಗೂ ವಿಶ್ವವಿದ್ಯಾನಿಲಯದಲ್ಲಿ ಮಾಡುವ ಅಧ್ಯಯನವೇ 'ಜ್ಞಾನ' ಎಂದುಕೊಂಡಿದ್ದರು. ಶ್ರೀರಾಮಕೃಷ್ಣರ ಬಗ್ಗೆ ಮಾಸ್ಟರ್ ದಕ್ಷಿಣೇಶ್ವರದ ಕಾಳಿಮಂದಿರದ ಕೆಲಸದವಳನ್ನು ಹೀಗೆ ಕೇಳಿದರು: "ಇವರೇನು ತುಂಬ ಪುಸ್ತಕ ಗಿಸ್ತಕ ಓದುತ್ತಾರೆಯೆ?" ರಾಮಕೃಷ್ಣರು ಯಾವುದೇ ರೀತಿಯ ಪುಸ್ತಕಗಳನ್ನೂ ಓದುವುದಿಲ್ಲ ಎಂಬುದನ್ನು ತಿಳಿದು ಅವರಿಗೆ ಆಶ್ಚರ್ಯವಾಯಿತು. ಉಪನಿಷತ್ತು ಈ ವಿಚಾರವಾಗಿ ಹೀಗೆ ಘೋಷಿಸುತ್ತದೆ: **'ನಾಯಮಾತ್ಮಾ ಪ್ರವಚನೇನ ಲಭ್ಯಃ'** ಪಂಚ ಇಂದ್ರಿಯಗಳಿಂದ ನಾವು ಹೊರಗಿನ ಜ್ಞಾನವನ್ನು ಪಡೆಯುತ್ತೇವೆ. ಆದರೆ ಆತ್ಮಜ್ಞಾನವನ್ನು ಪಡೆಯಲು ಇಂದ್ರಿಯಗಳು ಭೋಗವಸ್ತುಗಳಿಂದ ವಿಮುಖವಾಗಿ ಅಂತರ್ಮುಖವಾಗಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಓದುವುದಕ್ಕಿಂತ ಕೇಳುವುದು ಒಳ್ಳೆಯದು, ಕೇಳುವುದಕ್ಕಿಂತ ನೋಡುವುದು ಒಳ್ಳೆಯದು" ಎಂದು. ಅಂದರೆ ಶಾಸ್ತ್ರಗಳನ್ನು ಓದಿದರೆ ಒಂದು ರೀತಿಯ ತಿಳಿವಳಿಕೆ ಸಿಗುತ್ತದೆ. ಮಹಾಪುರುಷರ ಅನುಭವವಾಣಿಯನ್ನು ಕೇಳಿ ಪಡೆವ ಅರಿವು ಇದಕ್ಕಿಂತ ಉತ್ತಮ. ಸ್ವತಃ ಪಡೆದ ಅನುಭವ ನಮ್ಮನ್ನು ಅಜ್ಞಾನದಿಂದ ಮುಕ್ತಗೊಳಿಸುತ್ತದೆ. ಬುದ್ಧಿಯನ್ನು ಶುದ್ಧ ಹಾಗೂ ಸೂಕ್ಷ್ಮವನ್ನಾಗಿ ಮಾಡಲು ಶಾಸ್ತ್ರದ ಅಧ್ಯಯನ ಹಾಗೂ ಚರ್ಚೆಯು ಅಗತ್ಯ ಎನ್ನುತ್ತಾರೆ ಶಂಕರಾಚಾರ್ಯರು. ಆದರೆ, ಪಾಂಡಿತ್ಯ ಪ್ರದರ್ಶನವೇ ಮುಖ್ಯವಾಗಬಾರದೆಂದು ವಿವಿಧ ರೀತಿಯ ಕಥೆ ಹಾಗೂ ಉಪಮೆಗಳಿಂದ ಶ್ರೀರಾಮಕೃಷ್ಣರು ಎಚ್ಚರಿಕೆಯನ್ನು ನೀಡುತ್ತಾರೆ. "ಶಾಸ್ತ್ರ ಗೀಸ್ತ್ರದಿಂದ ಏನಾಗುತ್ತದೆ? ವಿವೇಕ ವೈರಾಗ್ಯಗಳಿಲ್ಲದಿದ್ದರೆ ಶಾಸ್ತ್ರದ ಅಧ್ಯಯನ ಯಾವ ಕೆಲಸಕ್ಕೂ ಬಾರದು" ಎಂದವರು ಸ್ಪಷ್ಟವಾಗಿ ಹೇಳುತ್ತಾರೆ. ಅವ್ಯಕ್ತನಾದ ಬ್ರಹ್ಮನ ಉಪಾಸನೆ ಅತ್ಯಂತ ಕಠಿಣವಾದದ್ದು ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಹೇಳುತ್ತಾನೆ. ಯಾರಲ್ಲಿ ಕಾಮಕಾಂಚನ ಆಸಕ್ತಿ ಇಲ್ಲವೋ, ನಿಷ್ಕಾಮ ಕರ್ಮದತ್ತ ಮನಸ್ಸಿದೆಯೋ ಅವರಿಗಾಗಿ ಜ್ಞಾನಯೋಗ; ಉಳಿದವರು ಭಕ್ತಿಯೋಗ ಹಾಗೂ ಕರ್ಮಯೋಗಗಳನ್ನು ಅವಲಂಬಿಸಿದರೇ ಒಳ್ಳೆಯದು ಎಂಬ ಅಭಿಪ್ರಾಯ ಭಾಗವತದಲ್ಲಿಯೂ ವ್ಯಕ್ತವಾಗಿದೆ.



ಶಂಕರಾಚಾರ್ಯರು ಹೇಳುತ್ತಾರೆ, ಸಾಧನಚತುಷ್ಟಯ ಸಂಪನ್ನನಾದ, ತ್ಯಾಗಿಯಾದ ವ್ಯಕ್ತಿಗೆ ಮಾತ್ರ ಆತ್ಮ–ಅನಾತ್ಮ ವಸ್ತು ವಿಚಾರ ಮಾಡುವ ಅಧಿಕಾರವಿದೆ ಎಂದು. ಸಾಧನಚತುಷ್ಟಯವೆಂದರೆ, **ನಿತ್ಯಾನಿತ್ಯ ವಸ್ತು ವಿವೇಕ, ಇಹಲೋಕ ಹಾಗೂ ಪರಲೋಕಗಳಲ್ಲಿ ಸಿಗುವ ಕರ್ಮಫಲ ಮತ್ತು ಭೋಗದಲ್ಲಿ ವೈರಾಗ್ಯ, ಶಮ, ದಮ ಮುಂತಾದ ಆರು ಗುಣಗಳ ಸಾಧನೆ, ಮೋಕ್ಷಕ್ಕಾಗಿನ ತೀವ್ರ ಆಕಾಂಕ್ಷೆ.** ಇಂಥ ಗುಣಗಳಿರುವ ವ್ಯಕ್ತಿಗಳು ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನದ ಅಧಿಕಾರಿಯಾಗಬಲ್ಲರು. ಶಂಕರಾಚಾರ್ಯರು ಮತ್ತೊಂದೆಡೆ ಹೇಳುತ್ತಾರೆ, "ಸಾಧನಚತುಷ್ಟಯಸಂಪನ್ನರಲ್ಲದ ಗೃಹಸ್ಥರು ಆತ್ಮ ಅನಾತ್ಮ ವಿಚಾರ ಮಾಡಿದರೆ ಅದರಲ್ಲಿಯೂ ಲಾಭವಿದೆ. ಬ್ರಹ್ಮಜ್ಞಾನವಾಗದೆ ಇದ್ದರೂ ಜಗತ್ತಿನ ದುಃಖ ಮೋಹಗಳಿಂದ ಮನಸ್ಸನ್ನು ಮೇಲೆತ್ತಲು ಇದು ಸಹಾಯಕವಾಗುತ್ತದೆ" ಎಂದು. ಈ ಉದ್ದೇಶದಿಂದಲೇ ಶ್ರೀರಾಮಕೃಷ್ಣರು ತಮ್ಮ ಬಳಿ ಬರುತ್ತಿದ್ದ ಸಾಮಾನ್ಯ ಜನರಿಗೂ ಜ್ಞಾನಯೋಗದ ಬಗ್ಗೆ ತಿಳಿವಳಿಕೆ ಹೇಳುತ್ತಿದ್ದರು. ಆದರೆ ಜ್ಞಾನಮಿಶ್ರಿತ ಭಕ್ತಿಗೆ ಮಾತ್ರ ಪ್ರಾಧಾನ್ಯತೆ ಕೊಡುತ್ತಿದ್ದರು.

ಜ್ಞಾನಮಾರ್ಗದ ಮೊದಲ ಹೆಜ್ಜೆ, **'ನೇತಿ ನೇತಿ'** – 'ಇದಲ್ಲ ಇದಲ್ಲ' ಎನ್ನುವುದು. ಈ ಮಾರ್ಗದ ಮೂಲಕ ಅನಿತ್ಯವಾದ ಜಗತ್ತನ್ನು

ತನ್ನಿಂದ ಬೇರೆ ಮಾಡಲು ಸಾಧಕ ಯತ್ನಿಸುತ್ತಾನೆ. ಬ್ರಹ್ಮವೊಂದೇ ಸತ್ಯ ಹಾಗೂ ಜಗತ್ತಿನ ಉಳಿದೆಲ್ಲಾ ಅನಿತ್ಯ ಎಂಬ ವಿಚಾರ ಮಾಡುತ್ತ ಮನಸ್ಸನ್ನು ಜಗತ್ತಿನ ಭ್ರಾಂತಿಯಿಂದ ಮುಕ್ತಗೊಳಿಸುವ ಪ್ರಯತ್ನವಿದು. ಶ್ರೀರಾಮಕೃಷ್ಣರು ಹೇಳುತ್ತಾರೆ, ಇದು ಬೆಂಕಿಕಡ್ಡಿಯನ್ನು ಉಜ್ಜುತ್ತಾ, ಉಜ್ಜುತ್ತಾ ಇದ್ದಾಗ ಅದು 'ಧಪ್' ಎಂದು ಬೆಂಕಿ ಹತ್ತಿಕೊಂಡು, ಕತ್ತಲೆ ಕೋಣೆ ಬೆಳಕಾದಂತೆ ಎಂದು. ಅವರು ಸಾಧಾರಣ ಮನುಷ್ಯರಿಗೂ ಹೀಗೆ ವಿಚಾರ ಮಾಡುವುದನ್ನು ಕಲಿಸುತ್ತಾರೆ: "ನಾನು ಯಾರು ಎಂದು ಯೋಚಿಸುತ್ತಾ ಹೋಗು, ನೋಡೋಣ. ನಾನೇನು ಈ ಮಾಂಸವೆ? ಮೂಳೆಯೆ? ರಕ್ತ, ಕೊಬ್ಬು ಅಥವಾ ಮನಸ್ಸೆ? ಇಲ್ಲ, ಬುದ್ಧಿಯೆ? ಈ ರೀತಿ ವಿಚಾರ ಮಾಡುತ್ತ, ಮಾಡುತ್ತ ಮನಸ್ಸಿಗೊಮ್ಮೆ ಹೊಳೆಯುತ್ತದೆ. ನಾನು ಇದೊಂದೂ ಅಲ್ಲ. 'ನೇತಿ ನೇತಿ' – ಆತ್ಮವನ್ನು ಹಿಡಿಯಲೂ, ಮುಟ್ಟಲೂ ಆಗುವುದಿಲ್ಲ. ಆತ ನಿರ್ಗುಣ, ನಿರುಪಾಧಿಕ." ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ನೇತಿ, ನೇತಿ ಎಂಬ ವಿಚಾರ, ಜಗತ್ತನ್ನು ಅಲ್ಲಗಳೆಯುವುದಕ್ಕೆ ಇರುವುದಲ್ಲ. ಜಗತ್ತಿನಲ್ಲಿದ್ದೂ, ಅದರಲ್ಲಿ ಅಂಟಿಕೊಳ್ಳದಿರಲು ಸಾಧಕನು ಮಾಡುವ ಪ್ರಯತ್ನವಿದು." ಶ್ರೀರಾಮಕೃಷ್ಣರು ಗೃಹಸ್ಥರಾದ ಮಾಸ್ಟರ್ ಮಹಾಶಯರಿಗೆ ಹೇಳುತ್ತಾರೆ, "ಮನೆಯಲ್ಲಿ ಎಲ್ಲರೊಂದಿಗೆ ಪ್ರೀತಿಯಿಂದ ನಡೆದುಕೋ. ಆದರೆ ನಿನ್ನೊಳಗೆ ಈ ವಿಚಾರ ಜಾಗೃತವಾಗಿರಲಿ, ನೀನು ಅವರ್‍ಯಾರಿಗೂ ಸೇರಿದವನಲ್ಲ ಹಾಗೂ ಅವರ್‍ಯಾರೂ ನಿನ್ನ ಸ್ವಂತದವರಲ್ಲ... ಮನಸ್ಸಿನಿಂದ ಸಂಪೂರ್ಣವಾಗಿ ಆಸಕ್ತಿ ಹೊರಟು ಹೋದರೇನೇ ಆತನ ದರ್ಶನವಾಗುತ್ತದೆ."

ಈ ಶರೀರವನ್ನು ಮೀರಿ ಚಿಂತಿಸಲು ನಮಗೆ ಸಾಧ್ಯವಿಲ್ಲ. ಹೀಗಾಗಿ ಇದರ ಹಿಂದೆ ಆನಂದಸ್ವರೂಪವಾದ ಆತ್ಮವಿದೆ ಎಂಬ ಅರಿವು ನಮಗೆ ಆಗುವುದಿಲ್ಲ. "ಕಾಮಿನಿ ಕಾಂಚನಗಳ ಮೇಲಿನ ಆಸಕ್ತಿ ಹೊರಟುಹೋದರೆ, ಈ ಶರೀರ ಬೇರೆ, ಆತ್ಮ ಬೇರೆ ಎಂಬ ಬೋಧೆ ಉಂಟಾಗುತ್ತದೆ" ಎನ್ನುತ್ತಾರೆ ಶ್ರೀರಾಮಕೃಷ್ಣರು. ಅಂತಹ ಬೋಧೆಯೇ ಜ್ಞಾನ. ಇದೇ ಆಧ್ಯಾತ್ಮಿಕ ಜೀವನದ ಮೊದಲನೆಯ ಹಂತ. ಈ ಬಗ್ಗೆ ನಮ್ಮಲ್ಲಿ ಇನ್ನೂ ಸ್ಪಷ್ಟವಾದ ತಿಳಿವಳಿಕೆಯನ್ನು ಉಂಟುಮಾಡಲು ಅವರೊಂದು ಉದಾಹರಣೆಯನ್ನು ಕೊಡುತ್ತಾರೆ: "ಒಬ್ಬ ವ್ಯಕ್ತಿ ಕತ್ತಲೆಯ ಕೋಣೆಯಲ್ಲಿ ತಡಕಾಡುತ್ತಾ ತನ್ನ ಮನೆಯೊಡೆಯನನ್ನು ಹುಡುಕುತ್ತಿದ್ದಾನೆ. ಅವನ ಕೈಗೆ ಬೇರೆ ಬೇರೆ ವಸ್ತುಗಳು ತಗಲುತ್ತಿವೆ. 'ಇದಲ್ಲ ಇದಲ್ಲ', 'ನೇತಿ ನೇತಿ' ಎಂದು ಅವನು ಮುಂದುವರೆಯುತ್ತಾ, ಕೊನೆಯಲ್ಲಿ, ಮಲಗಿದ್ದ ಒಡೆಯನ ಶರೀರಕ್ಕೆ ಅವನ ಕೈ ತಗುಲಿದಾಗ, 'ಆಹಾ, ಯಜಮಾನರು ಇಲ್ಲೇ ಇದ್ದಾರೆ' ಎಂದು ಅರಿವಾಗುತ್ತದೆ. ಆದರೆ ಆತ ಕಣ್ಣಿಗೆ ಬಿದ್ದಿಲ್ಲ, ಮಾತು ಕತೆಯೂ ಆಗಿಲ್ಲ. ಶ್ರೀರಾಮಕೃಷ್ಣರ ಮಾತಿನಲ್ಲಿ ಹೇಳುವುದಾದರೆ, ವಿಶೇಷರೂಪದಲ್ಲಿ ತಿಳಿಯಲು ಅವನಿಗೆ ಇನ್ನೂ ಆಗಿಲ್ಲ; ಸಾಮಾನ್ಯ ರೀತಿಯಲ್ಲಿ 'ದೇವರು ಇದ್ದಾನೆ' ಎಂಬ ಈ ಬೋಧೆಯೇ ಜ್ಞಾನ.

ಒಬ್ಬ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋದಮೇಲಷ್ಟೇ, ಆತ ಏರಿ ನಿಂತ ತಾರಸಿ ಹಾಗೂ ಅಲ್ಲಗಳೆದು ಬಿಟ್ಟು ಬಂದ ಮೆಟ್ಟಿಲುಗಳು – ಎಲ್ಲವೂ ಒಂದೇ ಇಟ್ಟಿಗೆ, ಸಿಮೆಂಟುಗಳಿಂದ ತಯಾರಾಗಿರುವುದು ಅವನಿಗೆ ಗೊತ್ತಾಗುತ್ತದೆ. ಈ ಉಪಮೆಯನ್ನು ಕೊಟ್ಟು ಶ್ರೀರಾಮಕೃಷ್ಣರು ಹೇಳುತ್ತಾರೆ, "ಈಗ, 'ನೇತಿ ನೇತಿ' ಎಂಬ ಮಾತಿಲ್ಲ, ಕೇವಲ 'ಇತಿ ಇತಿ'. ಪ್ರತಿಯೊಂದೂ ಚೈತನ್ಯಮಯ ಆತ್ಮವೇ, **'ಸರ್ವಂ ಖಲ್ವಿದಂ ಬ್ರಹ್ಮ'**." ಈ ಹಂತದಲ್ಲಿ ಏನೊಂದರ ನಿರಾಕರಣೆಯೂ ಇಲ್ಲ. ಈ ಅನುಭೂತಿಯನ್ನು ಶ್ರೀರಾಮಕೃಷ್ಣರು 'ವಿಜ್ಞಾನ' ಅಂದರೆ ವಿಶೇಷರೂಪದ ಜ್ಞಾನ ಎಂದು ಕರೆಯುತ್ತಾರೆ. ಈ ಅನುಭವವನ್ನು ಪಡೆದ ವ್ಯಕ್ತಿ ಜಗತ್ತನ್ನು ಯಾವ ದೃಷ್ಟಿಯಿಂದ ಕಾಣುತ್ತಾನೆ ಎಂಬ ಪ್ರಶ್ನೆಗೆ ಅವರು ಕಚ ಎಂಬುವವನ ಪ್ರಸಂಗವನ್ನು ಹೇಳುತ್ತಾರೆ. " ಕಚನ ನಿರ್ವಿಕಲ್ಪಸಮಾಧಿ ಭಂಗವಾದ ನಂತರ ಒಬ್ಬ ವ್ಯಕ್ತಿ ಕೇಳಿದನು, 'ಈಗ ಈ ಹೊರಜಗತ್ತನ್ನು ನೋಡಿ ನಿನಗೇನನ್ನಿಸುತ್ತದೆ?' ಅದಕ್ಕೆ ಕಚ ಹೇಳಿದನು, 'ಈ ಜಗತ್ತು ಈಶ್ವರನಿಂದಲೇ ತುಂಬಿ ಹೋಗಿರುವುದನ್ನು ಕಾಣುತ್ತಿದ್ದೇನೆ... ಎಲ್ಲಾ ವಸ್ತುಗಳೂ ಆತನೇ. ಏನನ್ನು ಸ್ವೀಕರಿಸಲಿ, ಏನನ್ನು ಬಿಡಲಿ, ಗೊತ್ತಾಗುತ್ತಿಲ್ಲ.' "

'ಬ್ರಹ್ಮನನ್ನು ಬಿಟ್ಟು ಇನ್ನೇನೂ ಇಲ್ಲ' ಎಂದು ತಿಳಿಯುವುದೇ ವಿಜ್ಞಾನ. ಶ್ರೀರಾಮಕೃಷ್ಣರು ವಿಜ್ಞಾನಿಯ ಬಗ್ಗೆ ಕೊಟ್ಟ ವಿವರಣೆ ಮತ್ತೂ ವಿಶೇಷವಾಗಿದೆ. ಜ್ಞಾನದಲ್ಲಿಯೇ ವಿವಿಧ ಸ್ತರಗಳಿರುತ್ತವೆ. ಅವರು ಅದನ್ನು ತಮ್ಮ ವಿವರಣೆಯಲ್ಲಿ ಸ್ಪಷ್ಟಪಡಿಸುತ್ತಾರೆ. ಜ್ಞಾನಿಗೆ ಸರ್ವಭೂತಗಳ ಹಿಂದೆ ಈಶ್ವರನ ಶಕ್ತಿ ಇದೆ ಎಂಬ ಬೋಧೆ ಜಾಗೃತವಾಗಿದೆ. ಆದರೆ ಸಾಧಕನ ಅವಸ್ಥೆಯಲ್ಲಿ ದ್ವೈತಭಾವ ದೂರವಾಗಿಲ್ಲ. ಆ ಸ್ಥಿತಿಯನ್ನು ತಲುಪಿದ ಮೇಲೆಯೂ ಅಜ್ಞಾನದ ಹಿಡಿತಕ್ಕೆ ಸಿಗುವ ಭಯವಿದೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಜ್ಞಾನವಿದ್ದಲ್ಲಿ ಅಜ್ಞಾನದ ಭಯವಿದೆ... ಜ್ಞಾನದ ಮುಳ್ಳಿನಿಂದ ಅಜ್ಞಾನದ ಮುಳ್ಳನ್ನು ತೆಗೆದು ನಂತರ ಎರಡನ್ನೂ ಎಸೆಯಬೇಕು. ಜ್ಞಾನ, ಅಜ್ಞಾನಗಳನ್ನು ಮೀರಿ ಹೋಗುವುದೇ 'ವಿಜ್ಞಾನ'." ವಿಜ್ಞಾನಿಗೆ ಆತ್ಮಾನುಭೂತಿಯು ಜೀವನದ ಪ್ರತಿಕ್ಷಣದಲ್ಲಿಯೂ ಜಾಗೃತ ವಾಗಿರುತ್ತದೆ. ಗುರುದೇವರು ಹೇಳುತ್ತಾರೆ, "ಸಾಧಾರಣ ಮನುಷ್ಯರಾದ ನಾವು ಹಾಲಿನ ಬಗ್ಗೆ ಕೇಳಿದ್ದೇವೆ, ಜ್ಞಾನಿ ಹಾಲನ್ನು ಕಂಡಿದ್ದಾನೆ. ವಿಜ್ಞಾನಿ ಹಾಲನ್ನು ಕುಡಿದು ಪುಷ್ಟಿಯನ್ನು ಪಡೆದಿದ್ದಾನೆ. ವಿಜ್ಞಾನಿ ಅಖಂಡ ಸಚ್ಚಿದಾನಂದದಲ್ಲಿ ಒಂದಾಗಿದ್ದಾನೆ."

"ಧೀರರಾದ ವ್ಯಕ್ತಿಗಳು ಅಂತರ್ಮುಖರಾಗಿ ಈ ಆತ್ಮವು ತಮ್ಮೊಳಗೇ ಇರುವುದನ್ನು ಅನುಭವಿಸುತ್ತಾರೆ; ಆ ಮೂಲಕ ಶಾಶ್ವತ ಶಾಂತಿಯನ್ನು ಪಡೆಯುತ್ತಾರೆ." – ಹೀಗೆ ಉಪನಿಷತ್ತುಗಳಲ್ಲಿ, ಜ್ಞಾನಮಾರ್ಗದಲ್ಲಿ ಮುಂದುವರೆಯುವುದಕ್ಕೆ ಪ್ರೇರಣೆ ನೀಡಲು, 'ಆತ್ಮಜ್ಞಾನವುಂಟಾದರೆ ದುಃಖಕಷ್ಟಗಳಿಂದ ಮುಕ್ತಿ' ಎಂದು ಹೇಳಿದೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಆತ್ಮಜ್ಞಾನವಾದರೆ ಸುಖ ದುಃಖ, ಜನ್ಮ ಮೃತ್ಯುಗಳು ಕನಸಿನಂತೆ ತೋರುತ್ತವೆ." ಅವರಿಗೆ ಗಂಟಲಿನಲ್ಲಿ ಕ್ಯಾನ್ಸರ್ ಆಗಿ ಮಾತನಾಡಲೂ ಆಗುತ್ತಿರಲಿಲ್ಲ. ಅಂತಹ ಅವಸ್ಥೆಯಲ್ಲಿಯೂ ಅವರು ಹೇಳಿದರು, "ಈಗ ನನಗೆ ಕಾಣುತ್ತಿದೆ – ಇದು (ತಮ್ಮ ಶರೀರವನ್ನು ತೋರಿಸಿ) ಚರ್ಮವನ್ನು ಹೊದ್ದುಕೊಂಡಿರುವ ಅಖಂಡ (ಸಚ್ಚಿದಾನಂದ ಆತ್ಮ); ಗಂಟಲಿನಲ್ಲಾಗಿರುವ ಗಾಯ ಅದರ ಪಾಡಿಗೆ ಅದು ಒಂದು ಕಡೆ ಬಿದ್ದುಕೊಂಡಿದೆ."

"ಬ್ರಹ್ಮಜ್ಞಾನಿ ಪಡೆಯುವ ಅನುಭವವೇನು?" ಎಂದು ಒಮ್ಮೆ ವಿಜಯಕೃಷ್ಣ ಗೋಸ್ವಾಮಿ ಶ್ರೀರಾಮಕೃಷ್ಣರನ್ನು ಪ್ರಶ್ನಿಸುತ್ತಾನೆ. ಇದಕ್ಕೆ ಅವರು ಹೇಳುತ್ತಾರೆ, "ಉಪ್ಪಿನ ಗೊಂಬೆ ಸಮುದ್ರವನ್ನು ಅಳೆಯಲೆಂದು ನೀರಿಗೆ ಇಳಿಯಿತು. ಮತ್ತೆ ಹಿಂತಿರುಗಿ ಬಂದು ಅಲ್ಲಿ ತನಗಾದ ಅನುಭವವನ್ನು ತಿಳಿಸಲು ಅದಕ್ಕಾಗಲಿಲ್ಲ" ಎಂದು. ಉಪನಿಷತ್ತು ಹೇಳುತ್ತದೆ, **'ಬ್ರಹ್ಮವಿದ್ ಬ್ರಹ್ಮೈವ ಭವತಿ'** – ಯಾರಿಗೆ ಬ್ರಹ್ಮಾನುಭೂತಿಯಾಗಿದೆಯೋ ಆತ ಬ್ರಹ್ಮನೇ ಆಗಿ ಬಿಡುತ್ತಾನೆ. ಬೌದ್ಧಿಕವಾಗಿ ಈ ಸ್ಥಿತಿಯನ್ನು ಚಿಂತಿಸಲೂ, ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ನಮ್ಮ ಅಹಂಕಾರವೇ ಇಲ್ಲವಾಗುವ ಸ್ಥಿತಿಯಲ್ಲಿ ಮನಸ್ಸು ತಟಸ್ಥವಾಗುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಇದರಿಂದ ಆತನ ವ್ಯಕ್ತಿತ್ವದ ನಾಶವಾಗುವುದಿಲ್ಲ. ಶರೀರ, ಮನಸ್ಸು, ಅಹಂಕಾರಗಳ ಚಿಕ್ಕ ವರ್ತುಲದೊಳಗೆ ನಾವು ಬಂಧಿತರಾಗಿದ್ದೆವು. ಈ ಸಣ್ಣ ವರ್ತುಲದ ನಾಶವಾಗುತ್ತದೆ." ಈ ಸಣ್ಣ ವರ್ತುಲಕ್ಕೇ ಅವರು 'ಕ್ಷುದ್ರ ಅಹಂ' ಅಥವಾ 'ನಾನು ನನ್ನದು' ಎಂಬ ಅಹಂಕಾರ ಎನ್ನುತ್ತಿದ್ದರು, 'ವಿಶ್ವ ಅಹಂ' ಹೊಂದಿದಾಗ, ಜಗತ್ತಿನಲ್ಲಿ ಪಡೆವ ಎಲ್ಲಾ ಜ್ಞಾನಗಳನ್ನೂ ಮತ್ತೊಬ್ಬರಿಗೆ ವಿವರಿಸಬಹುದು. ಆದರೆ 'ಬ್ರಹ್ಮ ಎಂಜಲಾಗಿಲ್ಲ' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಬ್ರಹ್ಮಾನುಭವ ಏನೆಂಬುದನ್ನು ಬಾಯಿಯಲ್ಲಿ ಹೇಳಲಾಗದು ಎಂದು ಇದರ ಅರ್ಥ.

ಶ್ರೀರಾಮಕೃಷ್ಣರ ಈ ಅದ್ವೈತಜ್ಞಾನವು ಎಷ್ಟು ಆಳವಾಗಿತ್ತೆಂದು ತಿಳಿಸಲು ಸ್ವಾಮಿ ಶಾರದಾನಂದರು ಒಂದು ಘಟನೆಯನ್ನು ಹೇಳುತ್ತಾರೆ: ಗಂಟಲಿನ ಕ್ಯಾನ್ಸರ್ ಉಲ್ಬಣವಾಗಿ ಚಿಕಿತ್ಸೆಗೆಂದು ಶ್ರೀರಾಮಕೃಷ್ಣರು ಕಾಶೀಪುರದ ಒಂದು ಮನೆಯಲ್ಲಿದ್ದಾರೆ. ಅಲ್ಲಿ ಸ್ವಾಮಿ ವಿವೇಕಾನಂದರು ಹಾಗೂ ಮತ್ತಿತರ ಭಕ್ತರು, "ನೀವು ಈ ರೋಗವನ್ನು ಗುಣಪಡಿಸುವಂತೆ ತಾಯಿಗೆ (ಜಗನ್ಮಾತೆಗೆ) ಹೇಳಿ" ಎಂದು ಒತ್ತಾಯಿಸಲಾರಂಭಿಸಿದರು. ಕಡೆಯಲ್ಲಿ ಅವರು, "ಸಾಧ್ಯವಾದರೆ ಹೇಳುತ್ತೇನೆ" ಎಂದು ಒಪ್ಪಿಕೊಂಡರು. ಕೆಲವು ಗಂಟೆಗಳ ನಂತರ ಮತ್ತೆ ವಿಚಾರಿಸಿದಾಗ ಅವರೆಂದರು, "ತಾಯಿಗೆ ಹೇಳಿದೆ (ಗಂಟಲಿನ ಹುಣ್ಣನ್ನು ತೋರಿಸಿ), 'ಅಮ್ಮಾ ಈ ನೋವಿನಿಂದ ಏನೂ ತಿನ್ನಲಾಗುತ್ತಿಲ್ಲ, ತಿನ್ನಲು ಸಾಧ್ಯವಾಗುವಂತೆ ಮಾಡು.' ಆದರೆ ತಾಯಿ ನಿಮ್ಮೆಲ್ಲರನ್ನೂ ತೋರಿಸಿ ಹೇಳಿದಳು, 'ಇದೇನು ಮಾತು! ಇಷ್ಟೊಂದು ಬಾಯಿಗಳ ಮೂಲಕ ತಿನ್ನುತ್ತಿರುವೆಯಲ್ಲ?' "

ಸ್ವಸ್ವರೂಪವನ್ನು ಮರೆಸಿ ನಮ್ಮನ್ನು ದುಃಖ ಗೊಂದಲಗಳಲ್ಲಿ ಮುಳುಗಿಸಿರುವ ಈ ಅಜ್ಞಾನ ಅಥವಾ ಮಾಯೆ ಎನ್ನುವುದಾದರೂ ಏನು? ಅಜ್ಞಾನದ ಮೂಲವಿರುವುದು 'ನಾನು, ನನ್ನದು' ಎಂಬ ಅಹಂಕಾರದಲ್ಲಿ ಎಂದು ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುತ್ತಾರೆ. ಪರಮಾರ್ಥದೃಷ್ಟಿಯಲ್ಲಿ ಅಜ್ಞಾನವಿಲ್ಲ, ಸರ್ವವೂ ಬ್ರಹ್ಮವೇ. ಅಜ್ಞಾನದ ವಶದಲ್ಲಿರುವ ಮನಸ್ಸು ಸತ್ಯವನ್ನು ಸತ್ಯದಂತೆ ಕಾಣದೆ ಈ ಅನಿತ್ಯ ಜಗತ್ತಿನ ರೂಪದಲ್ಲಿ ಕಾಣುತ್ತದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಅನಂತವನ್ನು ದೇಶ ಕಾಲ ಕಾರ್ಯ ಕಾರಣಗಳ ಪರಿಧಿಯೊಳಗೆ ತಂದಾಗಲೇ ಭ್ರಾಂತಿಯ ಸೃಷ್ಟಿ ಮೂಡುವುದು; ಇದೇ ಮಾಯೆ. ಕಾಲಾತೀತ, ದೇಶಾತೀತ 'ಆತ್ಮ', ಜನ್ಮಮೃತ್ಯುಗಳ ಭ್ರಾಂತಿಯೊಳಗೆ ಬೀಳುತ್ತದೆ. ಈ ಮಾಯೆ ಎಂದರೇನು? ಏತಕ್ಕಾಗಿ ನಾವು ಬದ್ಧರಾಗಿದ್ದೇವೆ? ಎನ್ನುವ ಪ್ರಶ್ನೆಗೆ ಇದೇ ಉತ್ತರ." ಅದ್ವೈತವಾದಿಗಳ ದೃಷ್ಟಿಯಲ್ಲಿ ಈ ಜಗತ್ತು ಮಾಯೆ, ತೋರಿಕೆ ಮಾತ್ರ. ಹಗ್ಗವನ್ನು ದೂರದಿಂದ ಕಂಡು ಹಾವೆಂದು ಭಾವಿಸಿದಂತೆ. ಇದು ಕೇವಲ ಹಗ್ಗ ಎಂಬ ಜ್ಞಾನದಿಂದ ಭ್ರಾಂತಿ ದೂರವಾಗುತ್ತದೆ. ಅಜ್ಞಾನ ಅಥವಾ ಮಾಯೆ ಜ್ಞಾನದ ಆಶ್ರಯವಿಲ್ಲದೆ ಇರಲಾರದು. ಗೀತೆಯಲ್ಲಿ ಹೇಳಿದೆ, 'ಅಸತ್ ವಸ್ತುವಿಗೆ ಅಸ್ತಿತ್ವವಿಲ್ಲ.' ಸದ್ವಸ್ತು ಅಸತ್ತಿನ ಹಿಂದೆ ಇರುವುದರಿಂದಲೇ ಅನಿತ್ಯ ವಸ್ತುವಿನ ಕ್ಷಣಿಕ ಅಸ್ತಿತ್ವ ನಮಗೆ ಸತ್ಯವೆಂದು ತೋರಿ ಬರುವುದು. ಈ ಕುರಿತು ಶ್ರೀರಾಮಕೃಷ್ಣರು ಹೇಳುತ್ತಾರೆ, "ಈಶ್ವರ ಮಹಾಸಮುದ್ರದಂತೆ, ಅದರಲ್ಲಿ ಏಳುವ ನೀರಿನ ಗುಳ್ಳೆಗಳು ಈ ಜೀವ, ಜಗತ್ತು. ಈ ಸಮುದ್ರದಿಂದಲೇ ಅವುಗಳ ಸೃಷ್ಟಿ, ಲಯವಾಗುವುದೂ ಅದರಲ್ಲಿಯೇ." ಸಮುದ್ರದಲ್ಲಿ ಗುಳ್ಳೆಗಳ ಅಸ್ತಿತ್ವ ಕಾಣಿಸುವುದು ಆ ಸಮುದ್ರ ಇರುವುದರಿಂದಲೇ. ಹಾಗೆಯೇ ಈ ಜಗತ್ತಿನ ಅಸ್ತಿತ್ವವಿರುವುದು ಅವಿನಾಶಿಯಾದ ಬ್ರಹ್ಮ ಇರುವುದರಿಂದಲೇ.

ಶ್ರೀರಾಮಕೃಷ್ಣರು ಲೋಕಕ್ಕೆ ಶಿಕ್ಷಣವನ್ನು ನೀಡಲು ಸಮಾಧಿಯ ಅವಸ್ಥೆಯಿಂದ ಈ ಜಗತ್ತಿನ ಸ್ತರಕ್ಕೆ ತಮ್ಮ ಮನಸ್ಸನ್ನು ಎಳೆದು ತರುತ್ತಿದ್ದರು. ಅವರು ಅದ್ವೈತಮತವನ್ನು ಒಪ್ಪಿದಂತೆ ವಿಶಿಷ್ಟಾದ್ವೈತವನ್ನೂ ಒಪ್ಪುತ್ತಾರೆ. ಬ್ರಹ್ಮ ಹಾಗೂ ಜಗತ್ತಿನಲ್ಲಿ ಆತನ ಲೀಲೆಯನ್ನೂ ಒಪ್ಪುತ್ತಾರೆ. ಈ ಲೀಲೆಯನ್ನೇ 'ಬ್ರಹ್ಮನ ಶಕ್ತಿ' ಅಥವಾ 'ಪ್ರಕೃತಿ' ಎನ್ನುತ್ತಾರೆ. ಈ ಪ್ರಕೃತಿಗೇ ಶ್ರೀರಾಮಕೃಷ್ಣರು ಆದ್ಯಾಶಕ್ತಿ, 'ಕಾಳಿ' ಎನ್ನುತ್ತಿದ್ದರು. ಕಾಳಿಯೇ ಬ್ರಹ್ಮ, ಜಗತ್ಕಾರಣ ರೂಪಿಣಿ. ಶ್ರೀರಾಮಕೃಷ್ಣರು ಹೇಳುತ್ತಾರೆ, "ನಾವು ನೋಡುತ್ತಿರುವುದು, ಕೇಳುತ್ತಿರುವುದು, ಚಿಂತೆಮಾಡುತ್ತಿರುವುದು ಪ್ರತಿಯೊಂದೂ ಆದ್ಯಾಶಕ್ತಿಯ ಲೀಲೆಯೇ. ನಮ್ಮ ಸಾಧನೆಯೂ ಈ ಶಕ್ತಿಯ ಪರಿಮಿತಿಯೊಳಗೇ ಬರುತ್ತದೆ. ಈ ಆದ್ಯಾಶಕ್ತಿ ಬ್ರಹ್ಮನನ್ನು ಮುಚ್ಚಿ ನಿಂತಿದೆ. ಈ ಆವರಣ ಸರಿದರೆ, ಎಂದೆಂದೂ ಏನಿರುತ್ತದೆಯೋ ಅದೇ ಪ್ರಕಾಶಿಸುತ್ತದೆ.. ಅಲ್ಲಿ ಎರಡಿಲ್ಲ, ನಾನು ನೀನು ಎಲ್ಲಾ ಒಂದೇ..." ಆಧುನಿಕ ಯುಗದಲ್ಲಿ ಮನುಷ್ಯನ ಬದುಕು ಹಾಗೂ ಕೆಲಸಗಳು ಆತನನ್ನು ವಿಪರೀತವಾಗಿ ಬಹಿರ್ಮುಖಿಯನ್ನಾಗಿ ಮಾಡಿವೆ. ಶ್ರೀರಾಮಕೃಷ್ಣರ ಅಭಿಪ್ರಾಯದಂತೆ, ಕಲಿಯುಗದಲ್ಲಿ ವೇದಮತ ಸಾಧ್ಯವಿಲ್ಲ; 'ಬ್ರಹ್ಮ–ಶಕ್ತಿ' ಅಭೇದ – ಹೀಗಾಗಿ ಶಕ್ತಿಯ ಉಪಾಸನೆಯಿಂದ ಮನಸ್ಸನ್ನು ಅದ್ವೈತದತ್ತ ತಿರುಗಿಸಲು ಸಾಧ್ಯ.

ಶ್ರೀರಾಮಕೃಷ್ಣರ ಅದ್ವೈತ ಸಾಧನೆಯ ಗುರುವಾದ ತೋತಾಪುರಿಯು ಬ್ರಹ್ಮಜ್ಞಾನಿಯಾಗಿದ್ದನು. ಆತ ಭಕ್ತಿಭಾವವನ್ನು ಕಡೆಗಣಿಸಿದ್ದನು. ಮಾತು ಮಾತಿಗೂ "ಅಮ್ಮನನ್ನು ಕೇಳಿ ಬರುತ್ತೇನೆ" ಎಂದು ಕಾಳಿಮಂದಿರಕ್ಕೆ ಓಡುತ್ತಿದ್ದ ಶ್ರೀರಾಮಕೃಷ್ಣರನ್ನು ಕಂಡು